ಶ್ರೀ ಎ. ವಿ. ನರಸಿಂಹರೆಡ್ಡಿ.—ನೆಲದಮೇಲೆ ಮಲಗಿರುವವರೆಲ್ಲರಿಗೂ ಹಾಸಿಗೆ ಕೊಟ್ಟಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಹಾಸಿಗೆ ಕೊಟ್ಟಿದೆ.

ಶ್ರೀ ಟಿ. ಮರಿಯಪ್ಪ.—ಪ್ರತಿ ದಿನವೂ ಸರಾಸರಿ 43 ಮಂದಿ ರೋಗಿಗಳನ್ನು ಸೇರಿಸಿಕೊಳ್ಳಲಾಗುತ್ತಿದೆ ಎಂದು ಹೇಳಿದ್ದೀರಿ. ಪ್ರತಿ ದಿನ ಎಷ್ಟು ಜನಕ್ಕೆ ನಿರಾಕರಿಸಲ್ಪಡುತ್ತಿದೆ ಎಂಬುದನ್ನು ಹೇಳಬಲ್ಲಿರಾ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಟಿ. ಮರಿಯಪ್ಪ.—ಎಷ್ಟು ಜನ applicants waiting list ನಲ್ಲಿ ಇದ್ದಾರೆ ಎಂಬುದನ್ನು ಹೇಳಬಲ್ಲಿರಾ ?

Sri T. CHANNIAH.—I want notice.

ಶ್ರೀ ಟಿ. ಮರಿಯಪ್ಪ.—ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ರತಿಯೊಂದು ವಾರ್ಡ್‌ನಲ್ಲೂ ಈಗಿರತಕ್ಕ ಸ್ಥಳದಲ್ಲೇ 10 ಜನ ರೋಗಿಗಳಿಗೆ ಅವಕಾಶ ಇರುವ ಕಡೆ 20-30 ಜನ ರೋಗಿಗಳಿದ್ದು ಅವರೆಲ್ಲರಿಗೂ ಮಂಚಗಳ ಮಧ್ಯೆ ನೆಲದಮೇಲೆ ಹಾಸಿಗೆಗಳನ್ನು ಹಾಕಿಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Sri T. CHANNIAH.—Even for that I want notice.

ಶ್ರೀ ಟಿ. ಮರಿಯಪ್ಪ.—ಮೊದಲು ಇದ್ದ ಶಿಬ್ಬಂದಿಯನ್ನೇ ಈಗಲೂ continue ಮಾಡುತ್ತಾ ಇದ್ದೀರಿ ಅಲ್ಲವೇ ?

Sri T. CHANNIAH.—Yes, Sir.

ಶ್ರೀ ಟಿ. ಮರಿಯಪ್ಪ.—ರೋಗಿಗಳ ಸಂಖ್ಯೆ ಜಾಸ್ತಿಯಾಗಿದ್ದು, ಅದಕ್ಕೆ ತಕ್ಕಷ್ಟು ಶಿಬ್ಬಂದಿ ಇದೆಯೇ ಇಲ್ಲವೇ ಎಂಬುದನ್ನು ವಿಮರ್ಶೆ ಮಾಡುತ್ತೀರಾ ?

Sri T. CHANNIAH.—Yes, Sir. If any proposal is received in that respect it will be examined.

ಶ್ರೀ ಟಿ. ಮರಿಯಪ್ಪ.—ಪ್ರಪೋಸಲ್ ನಮ್ಮಿಂದ ಬರುವುದು ಅಲ್ಲ. ತಾವೇ ಪ್ರಪೋಸಲ್ ತರಿಸುತ್ತೀರಾ ಅಂತ ? ಈ ಪ್ರಶ್ನೆ ಈಗ ಬಂದಿರುವಾಗ Head of the Department ನಿಂದ ಪ್ರಪೋಸಲ್ಸ್ ತರಿಸಿ ಪರ್ಯಾಲೋಚನೆ ಮಾಡುತ್ತೀರಾ ?

Sri T. CHANNIAH.—Yes, Sir.

Acquisition proceedings pertaining to Kote Harijankeri Extension in Chikballapur Town.

Q.—970. Sri A. MUNIYAPPA (Sidlaghatta—Chikballapur—Scheduled Castes).—

Will the Government be pleased to state :—

(*a*) whether it is a fact that the acquisition proceedings pertaining to the extension of Kote Harijankeri of Chikballapur Town are under correspondence since 1948 ;

(*b*) the reason for not yet disposing of this record till now ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) The matter is under correspondence.

ಶ್ರೀ ಎ. ಮುನಿಯಪ್ಪ.—ಈ ಪತ್ರವ್ಯವಹಾರ ಯಾವ ಮಟ್ಟದಲ್ಲಿದೆ ?

ಶ್ರೀ ಟಿ. ಚನ್ನಯ್ಯ.—ಈಗ ಅಕ್ವಿಸಿಷ್ಷನ್ ಸ್ಟೇಜ್‌ನಲ್ಲಿ ಇದೆ. ಸರ್ಕಾರದವರಿಗೆ ರಿಕಾರ್ಡ್‌ನ್ನು ಕಳುಹಿಸಿ ಕೊಡುತ್ತಾರೆ ಎಂಬುದಾಗಿ ರಿಪೋರ್ಟು ಕಳುಹಿಸಿ ಕೊಡಲಾಗಿದೆ. ಡೆಪ್ಯುಟಿ ಕಮೀಷನರಿಂದ ಸರ್ಕಾರದ ವರಿಗೆ ಆ ರಿಪೋರ್ಟು ಬಂದಮೇಲೆ ಅಕ್ವಿಸಿಷ್ಷ ಬಗ್ಗೆ ಜಾಗ್ರತೆ ಏರ್ಪಾಡುಮಾಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಇಷ್ಟು ದಿವಸ ನಿಧಾನವಾಗುವುದಕ್ಕೆ ಏನು ಕಾರಣ ?

ಶ್ರೀ ಟಿ. ಚನ್ನಯ್ಯ.—ಕಾರಣವೇನೆಂದರೆ ಮೊದಲು ಸರ್ವೇ ನಂಬರ್ 263 ಮತ್ತು 660 ರಲ್ಲಿ ಕೆರೆ ಪಕ್ಕದಲ್ಲಿರುವ ಜಮೀನನ್ನು ಅಕ್ವೈರ್ ಮಾಡಬೇಕೆಂಬುದಾಗಿ ಸಲಹೆ ಬಂದಿತ್ತು. ಆಮೇಲೆ ಕೆರೆ ಪಕ್ಕದಲ್ಲಿರುವುದು ಅನಾರೋಗ್ಯ ಎಂದು ಹೇಳಿ ಅದನ್ನು ಅಕ್ವೈರ್ ಮಾಡಬೇಕಾಗಿಲ್ಲವೆಂದು ಅಭಿಪ್ರಾಯಪಟ್ಟು 234 ಮತ್ತು 235ನೇ ಸರ್ವೇ ನಂಬರುಗಳಲ್ಲಿ ಜಾಗ ಅಕ್ವೈರ್‌ಮಾಡತಕ್ಕದ್ದು ಎಂದು ಹೇಳಿ ರಿಕಾರ್ಡ್ ಬಿಲ್ಡ್‌ಅಪ್ ಆಗಿದೆ. ಅದರ ಮೇಲೆ ಒಂದು ಸ್ಕೆಟ್ ಪ್ಲಾನ್ ಮುನಿಸಿಪಲ್ ಪ್ರೆಸಿಡೆಂಟರಿಗೆ ಅಮಲ್ದಾರರು ಕಳುಹಿಸಿಕೊಡಬೇಕಾಗಿತ್ತು ; ಅದನ್ನು ಡಿಸೆಂಬರ್‌ನಲ್ಲಿ ಕಳುಹಿಸಿಕೊಟ್ಟಿದ್ದಾರೆ. ಆ ರೀತಿ ಅಕ್ವಿಸಿಷ್ಷ ಆಗಬೇಕಾದ ಕ್ರಮದಲ್ಲಿ ಸ್ವಲ್ಪ ನಿಧಾನವಾಗುತ್ತದೆ.

ಶ್ರೀ ಎ. ಮುನಿಯಪ್ಪ.—ಅಕ್ವಿಸಿಷ್ಷ ಛಾರ್ಜಸ್ ಮೂರುಸಾವಿರ ರೂಪಾಯಿಗಳನ್ನು ಮೂರುವರ್ಷಗಳ ಹಿಂದೆ ಖಜಾನೆಗೆ ಡಿಪಾಜಿಟ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ, ರೂ. 2,758-6-3 ಮಾತ್ರ ಕ್ರೆಡಿಟ್ಟಾಗಿದೆ.

ಶ್ರೀ ಎ. ಮುನಿಯಪ್ಪ.—ಕೆರೆಪಕ್ಕದಲ್ಲಿರುವ ಜಮೀನು ಬಿಟ್ಟು ಬೇರೆ ಜಮೀನು ಅಕ್ವೈರ್‌ಮಾಡಬೇಕೆಂದು ವ್ಯವಹಾರ ನಡೆಯುತ್ತಿರುವುದು ಎಷ್ಟು ದಿವಸಗಳಿಂದ ?

ಶ್ರೀ ಟಿ. ಚನ್ನಯ್ಯ.—ಯಾವ ತಾರೀಖಿನಿಂದ ಎಂಬುದು ನಮಗೆ ವರದಿಯಾಗಿಲ್ಲ.

ಶ್ರೀ ಎ. ಮುನಿಯಪ್ಪ.—ಜಮೀನು ಮಾಲೀಕರು ಬಂದು ಅಕ್ವಿಜಿಷ್ಷ ಆಫೀಸರನ್ನು ಹಣ ಅನೇಕಸಲ ಕೇಳಿದರೂ ಬಹಳ ನಿಧಾನವಾಗಿ ಕೆಲಸ ಮಾಡುತ್ತಿರುವುದು ಗೊತ್ತೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ, ಅಕ್ವಿಸಿಷ್ಷ ಮಾಡುವ ಕ್ರಮದಲ್ಲಿ ಸ್ವಲ್ಪ ನಿಧಾನವಾಗಿದೆಯೆಂದು ಗೊತ್ತಾಗಿದೆಯೇ ಹೊರತು ಬೇರೆ ವಿಚಾರ ಸರ್ಕಾರಕ್ಕೆ ತಿಳಿದು ಬಂದಿಲ್ಲ.

ಶ್ರೀ ಎ. ಮುನಿಯಪ್ಪ.—ಅಮರ್ಥ್ಯರರು ಸ್ಕೆಟು ಪ್ಲಾನ್ ಮಾಡಿ ಮುನಿಸಿಪಾಲಟಿಗೆ ಒಂದು ವರ್ಷಕ್ಕಿಂತ ಮುಂಚಿತವಾಗಿ ಕಳುಹಿಸಿದರೂ ಸಹ ಇಲ್ಲಯವರೆಗೂ ಅದು ಮುನಿಸಿಪಾಲಟಿಯಲ್ಲೇ ಇರುವುದು ಗೊತ್ತೆ ?

ಶ್ರೀ ಟಿ. ಚನ್ನಯ್ಯ.—ಸ್ಕೆಟ್ ಪ್ಲಾನನ್ನು ಅನುಮೋದಿಸುವಾಗ ಸ್ವಲ್ಪ ನಿಧಾನವಾಗಿದೆ. 15-12-1953ರಲ್ಲಿ ಮುನಿಸಿಪಾಲಟಿ ಸ್ಕೆಟ್ ಪ್ಲಾನ್ ತಯಾರಿಸಿ ಅಮರ್ಥ್ಯರರಿಗೆ ಕಳುಹಿಸಿದ್ದಾರೆ.

ಶ್ರೀ ಎ. ಮುನಿಯಪ್ಪ.—ಮುನಿಸಿಪಲ್ ಪ್ರೆಸಿಡೆಂಟರು ಈ ವಿಚಾರದಲ್ಲಿ ಬಹಳ ನಿಧಾನಮಾಡುತ್ತಾ ಇರುವುದು ಗೊತ್ತೆ ?

ಶ್ರೀ ಟಿ. ಚನ್ನಯ್ಯ.—ಆ ವಿಷಯ ನನಗೆ ಗೊತ್ತಿಲ್ಲ.

ಶ್ರೀ ಎ. ಮುನಿಯಪ್ಪ.—ತಿಳಿಯದಿದ್ದರೆ ಅವರಿಗೆ ಬರೆದು ತಿಳಿದುಕೊಳ್ಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ವಿಚಾರಿಸುತ್ತೇವೆ.

ಶ್ರೀ ಎ. ಮುನಿಯಪ್ಪ.—ನಮ್ಮಾರು 300 ಮನೆಗಳವರು ಒಂದೊಂದು ಮನೆಯಲ್ಲಿ 3-4 ಸಂಸಾರ ವಿದ್ದೂ ಬಹಳ ತೊಂದರೆಪಡುತ್ತಿರುವುದು ಸರ್ಕಾರದ ಅವಗಾಹನೆಗೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಎ. ಮುನಿಯಪ್ಪ.—ಸ್ವಲ್ಪ ಎಚ್ಚರ್ಕೆ ತೆಗೆದುಕೊಳ್ಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಆಗಲಿ.

ಶ್ರೀ ಎ. ಮುನಿಯಪ್ಪ.—ಆದಷ್ಟು ಜಾಗ್ರತೆಯಾಗಿ ಯಾದರೂ ಈ ಕೆಲಸ ಮಾಡಿಕೊಡಲು ಏರ್ಪಾಡು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಜಾಗ್ರತೆಯಾಗಿ ಅಕ್ಕೆ ತೆಗೆದುಕೊಳ್ಳುವಂತೆ ಮಾಡಿ ವಶಕ್ಕೆ ಕೊಡಲು ಏರ್ಪಾಡು ಮಾಡುತ್ತೇವೆ.

Buildings for Depressed Class High and Middle School Hostels.

Q.—51. **Sri T. HANUMIAH** (Hiriyur-Scheduled Castes).—

Will the Government be pleased to state :—

(*a*) how many buildings are constructed for the Depressed Class High and Middle School Hostels in the State—District and Talukwar information may be furnished with the names of Hostels, cost of construction and the years in which constructed ;

(*b*) out of the above buildings how many are at Government cost and how many are on grant-in-aid basis—District and Talukwar ?

A.—**Sri A. G. RAMACHANDRA RAO** (Minister for Law and Education).—

(*a*) and (*b*) Statement appended.